# ಸ್ಟಾರ್ ಆಗುವುದಕ್ಕಿಂತ ಕಲಾವಿದೆ ಆಗುವ ಕನಸು



**ರೂಪಿಕಾ**

ಝೀ ಕನ್ನಡದ 'ಲಕ್ಷ್ಮೀ ನಿವಾಸ'ದ ಸಿಂಚನಾ

◆ **ಪಾತ್ರಧಾರಿ ಬದಲಾದಂತೆ ಕಥೆಯ ಹರವೂ ಬದಲಾಯಿತೇ?**

ಮದುವೆ ನಂತರ ಬೇರೆಯದೇ ತಿರುವನ್ನು ಪಡೆಯುವ ಪಾತ್ರ ಅದು. ಸಿದ್ದೇಗೌಡನ ಅಕ್ಕ ಸಿಂಚನಾ ಮದುವೆಯಾದ ಮೇಲೆ ತಮ್ಮನಿಗೆ ಸತ್ಯಾಂಶ ಗೊತ್ತಾಗಿದೆ. ಬಾವನ ಬಗ್ಗೆ ಒಳ್ಳೆಯ ಭಾವನೆ ಬಂದಿದೆ. ಸಂಬಂಧವನ್ನು ಒಪ್ಪಿಕೊಳ್ಳುವ ಮಟ್ಟಿಗೆ ಅವನೂ ಬದಲಾಗಿದ್ದಾನೆ. ಹಾಗೆಂದು ಪಾತ್ರಧಾರಿ ಬದಲಾದ ಮೇಲೆ ಪಾತ್ರವೂ ಬದಲಾಯಿತು ಅಂತ ಅಲ್ಲ. ನಾನು ಬಂದ ಮೇಲೆ ಪಾತ್ರಕ್ಕೆ ಹೊಸ ತಿರುವು ಸಿಕ್ಕಿದೆ ಎನ್ನುವುದಕ್ಕಿಂತ ಅದೇ ಸಮಯಕ್ಕೆ ಪಾತ್ರ ಬೆಳೆದಿದೆ. ಕಥೆಯ ನಿರೂಪಣೆ ಹಾಗೆ ಆಗಿರುವುದು ವಿಶೇಷ. ಬೇರೆಯವರು ನಿಭಾಯಿಸುತ್ತಿದ್ದ ಪಾತ್ರವನ್ನು ಪ್ರವೇಶ ಮಾಡಿದಾಗ ಬೇರೆಯದೇ ಸವಾಲು ಎದುರಾಗುತ್ತದೆ. ಅದನ್ನು ಸಮರ್ಪಕವಾಗಿ ಮಾಡುತ್ತಿದ್ದೇನೆ ಎಂದು ಅನಿಸಿದೆ.

◆ **ಕೂಡುಕುಟುಂಬದ ಸೊಸೆಯಾದ ಸಿಂಚನಾ ಖಾಸಗಿತನವನ್ನೂ ಕಳೆದುಕೊಂಡು ಒದ್ದಾಡುತ್ತಿದ್ದಾಳೆ ಎಂದು ಅನ್ನಿಸುತ್ತಾ?**

ಸಿಂಚನಾ ಪಾತ್ರ ಒಂದಿಷ್ಟು ಅಡ್ಡಿ ಆತಂಕಗಳನ್ನು ಎದುರಿಸುತ್ತಿರುವುದು ನಿಜ. ಹುಟ್ಟಿನಿಂದ ಆಕೆ ಶ್ರೀಮಂತ ಮನೆತನದವಳು. ಯಾವುದೇ ಕೊರತೆ ಇಲ್ಲದೆ ಬೆಳೆದಿದ್ದಾಳೆ. ಹರೀಶನ ಹಿನ್ನೆಲೆ ಗೊತ್ತಿಲ್ಲ, ಮದುವೆ ಆಗಿದ್ದಾಳೆ. ತಕ್ಷಣ ಹೊಸ ಮನೆಗೆ ಬಂದಾಗ ಇರಿಸು ಮುರಿಸು ಇದ್ದೇ ಇರುತ್ತದೆ. ಅದರಲ್ಲೂ ರಾಯಲ್ ಆಗಿದ್ದವಳು, ಮಧ್ಯಮ ವರ್ಗದ ಕುಟುಂಬಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಅದೇ ಸಮಯಕ್ಕೆ ಖಾಸಗಿತನಕ್ಕೂ ಇರುವ ಕೊರತೆ ಅವಳನ್ನು ಕಾಡುತ್ತದೆ. ಎಲ್ಲಕ್ಕಿಂತ 'ನಿನ್ನ ಗಂಡನಿಗೆ ಕೆಲಸ ಇಲ್ಲ' ಎಂದು ಹೀಯಾಳಿಸುವುದು ಆಕೆಗೆ ತುಂಬ ನೋವನ್ನು ಉಂಟುಮಾಡುತ್ತಿದೆ. ಯಾವುದೇ ಮಹಿಳೆಗೆ ತನ್ನ ಗಂಡನ ಬಗ್ಗೆ ಯಾರೇ ಟೀಕೆ ಮಾಡಿದರೂ ಆಕೆ ನೊಂದುಕೊಳ್ಳುವುದು ಸಹಜ.

◆ **ಸಿನಿಮಾ–ಸೀರಿಯಲ್‌ಗಳಲ್ಲಿ ಪಳಗಿರುವ ನೀವು, ಎಲ್ಲಿ ಎಂತಹ ಪಾತ್ರ ಇರಬೇಕು ಎಂದು ಬಯಸುತ್ತೀರಿ?**

ಸೀರಿಯಲ್–ಸಿನಿಮಾ ಎರಡರಲ್ಲಿ ನಟನೆ ಒಂದೇ ರೀತಿ ಇರುತ್ತದೆ. ಸೀರಿಯಲ್‌ನಲ್ಲಿ ವೀಕ್ಷಕರಿಗೆ ದಿನವೂ ತಲುಪುತ್ತೇವೆ. ಅವರ ಮನೆಯಲ್ಲಿ ನಾವೂ ಒಬ್ಬರು ಅನ್ನುವ ಭಾವನೆ ಅವರಿಗೆ ಬಂದಿರುತ್ತದೆ. ಸಿನಿಮಾ ವಿನ್ಯಾಸವೇ ಬೇರೆ, ವೀಕ್ಷಕರೂ ಬೇರೆ. ಎರಡರಲ್ಲೂ ನಾನು ಇಷ್ಟಪಟ್ಟು ನಟಿಸುತ್ತಿದ್ದೇನೆ. ಮುಂದೆಯೂ ನಟಿಸುವೆ ಎಂದುಕೊಂಡಿದ್ದೇನೆ. ಪಾತ್ರಗಳ ವಿಷಯಕ್ಕೆ ಬಂದರೆ ಬಾಲನಟಿಯಾಗಿ ಅಭಿನಯ ಜಗತ್ತನ್ನು ಪ್ರವೇಶ ಮಾಡಿದ್ದೇನೆ. ಅಂದಿನಿಂದ ಇಂದಿನ ತನಕ ಪ್ರಯೋಗಾತ್ಮಕ ಪಾತ್ರಗಳ ಮೇಲೆ ಮೆಚ್ಚುಗೆ ಇದೆ. ಇದೇ ಪಾತ್ರ ಮಾಡಬೇಕು ಎನ್ನುವ ಚೌಕಟ್ಟನ್ನು ಹಾಕಿಕೊಳ್ಳುವುದಿಲ್ಲ. ಸ್ಟಾರ್ ಆಗುವುದಕ್ಕಿಂತ ಕಲಾವಿದೆ ಆಗಬೇಕು ಎನ್ನುವುದು ನನ್ನ ಬಯಕೆ. ಎಲ್ಲ ಪಾತ್ರಗಳಲ್ಲಿಯೂ ನಮ್ಮನ್ನು ನಾವೂ ಪ್ರಯೋಗಕ್ಕೆ ಒಡ್ಡಿಕೊಳ್ಳಬೇಕು. ಅದುವೇ ಕಲಾವಿದರ ಪಾತ್ರ ಎಂದು ನಾನು ಅಂದುಕೊಂಡಿದ್ದೇನೆ. ರೂಪಿಕಾ ಇಂತಹ ಪಾತ್ರ ಮಾಡುತ್ತಾಳೆ ಎನ್ನುವ ವಿಶ್ವಾಸ ಒಬ್ಬರಿಗೆ ಬರುತ್ತದೆ ಎಂದರೆ, ನಾನು ಮಾಡಿದ ಪಾತ್ರಗಳ ಫಲಿತಾಂಶ ಅದು ಅನ್ನಬಹುದು.

◆ **ನಟಿಸಿದ ಅಷ್ಟೊಂದು ವ್ಯಕ್ತಿತ್ವಗಳಲ್ಲಿ ರೂಪಿಕಾ ಹೇಗೆ?**

ತುಂಬ ಸರಳ ಹುಡುಗಿ ನಾನು. ಅಲಂಕಾರದ ಮೆರುಗು ಇಲ್ಲ. ಜನರ ಜೊತೆ ಬೆರೆಯುವ ಮನೋಭಾವ ಇದೆ. ಕ್ರಿಯಾಶೀಲವಾಗಿ ಇರಬೇಕು ಎಂದು ಯೋಚಿಸುತ್ತೇನೆ. ಎರಡು ದಿನ ಕೆಲಸ ಇಲ್ಲ ಎಂದರೆ ಕಿರಿಕಿರಿ ಆರಂಭವಾಗುತ್ತದೆ. ಸಿನಿಮಾ–ಧಾರಾವಾಹಿ ಇಲ್ಲ ಅಂದರೆ ಬೇರೆ ಇನ್ನೇನೋ ಮಾಡಲು ಹವಣಿಸುತ್ತೇನೆ. ಯಾವುದೇ ಕಾರಣಕ್ಕೂ ಸುಮ್ಮನೆ ಕೂರುವುದಿಲ್ಲ. ಕಾಲಹರಣ ಮಾಡಲಾಗದೆ ಹೀಗೆ ಒಮ್ಮೆ ಡಾನ್ಸ್ ಕ್ಲಾಸ್ ಆರಂಭ ಮಾಡಿದೆ. ನಂತರ ನಿರೂಪಣೆ ಮಾಡಲು ಆರಂಭಿಸಿದೆ. ಸಿಂಚನಾ ಪಾತ್ರ ಬಂದಾಗ ಅದನ್ನೂ ಮಾಡಲು ಒಪ್ಪಿದೆ. ನನ್ನನ್ನು ನಾನು ಪ್ರಯೋಗಕ್ಕೆ ಒಡ್ಡಿಕೊಳ್ಳುವ ವ್ಯಕ್ತಿತ್ವ ನನ್ನದು.

◆ **ಅಭಿನಯ ಜಗತ್ತು ನಿಮ್ಮನ್ನು ಬರಮಾಡಿಕೊಂಡಿದ್ದು ಹೇಗೆ?**

ನಮ್ಮದು ಕಲಾವಿದರ ಕುಟುಂಬ. ಹಾಗೆಂದು ಯಾರೂ ಸಿನಿಮಾರಂಗಕ್ಕೆ ಪರಿಚಿತರಲ್ಲ. ನನ್ನ ಅಜ್ಜಿ, ಅಮ್ಮ ಕಲೆಯ ಬೇರೆ ಬೇರೆ ಪ್ರಕಾರದಲ್ಲಿ ತೊಡಗಿಕೊಂಡಿದ್ದರು. ಅಪ್ಪ–ಅಮ್ಮ ಸರ್ಕಾರಿ ನೌಕರರು. ಪೂರ್ವಪ್ರಾಥಮಿಕ ಶಾಲೆಯಲ್ಲಿ ಓದುವಾಗಲೇ ನನ್ನನ್ನು ಡಾನ್ಸ್ ಶಾಲೆಗೆ ಸೇರಿಸಿದ್ದರು. ಅಂದರೆ ಎಂಗೇಜ್ ಆಗಿರಲಿ ಎನ್ನುವ ಭಾವನೆ ಅವರದು. ಆಗ ತುಂಬ ತರ್ಲೆ ಇದ್ದೆ. ಹೇಗಾದರೂ ಸಂಜೆತನಕ ಬಿಜಿಯಾಗಿರಲಿ ಎನ್ನುವ ಪೋಷಕರ ಆಸೆಯಂತೆ ಡಾನ್ಸ್ ಕಲಿಕೆ ಆರಂಭವಾಯಿತು. ನನಗೆ ಆಸಕ್ತಿ ಇರಲಿಲ್ಲ. ಕ್ರಮೇಣ ಇಷ್ಟ ಆಯಿತು. ದೇಶ–ವಿದೇಶದಲ್ಲಿ 5000 ಕಾರ್ಯಕ್ರಮಗಳನ್ನು ನೀಡಿದ್ದೇನೆ. ನಾಟ್ಯವೇ ರಂಗಭೂಮಿ ಪರಿಚಯಿಸಿತು. ಯಾವುದೇ ಯೋಜನೆ ಇಲ್ಲದೆ ದೊಡ್ಡ ದೊಡ್ಡ ಕಲಾವಿದರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ನಂತರ ಸುಮಾರು ಹದಿನೈದು ಸೀರಿಯಲ್‌ಗಳಲ್ಲಿ ಬಾಲ ನಟಿಯಾಗಿ ಕಾಣಿಸಿಕೊಂಡೆ. ಹಾಗೆ ಇದ್ದಂತೆಯೇ ಸಿನಿಮಾಕ್ಕೆ ನಾಯಕಿಯಾದೆ.

■ **ರಾಘವೇಂದ್ರ ಕೆ.**